**ದಿನಾಂಕ: 20-09-2025ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ವಾಟೀ ಸವಾಲು: 2ನೇ ಎದುರುದಾರರ ಪರ ADGP ರವರಿಂದ**

1. ಸ.ನಂ.345/ಎ ರ ಮಾಲೀಕರೆಂದು ತೋರಿಸಲು ಏನಾದರೂ ದಾಖಲೆ ನ್ಯಾಯಾಲಯಕ್ಕೆ ಹಾಜರುಡಿಪಸಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದಾರೆಂದು ಹೇಳಲು ಆಗುತ್ತಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಸದರಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಸಮಯದಲ್ಲಿ ಸದರಿ ಜಮೀನಿನ ಮಾಲೀಕರು ಯಾರು ಇದ್ದರು ಎಂದರೆ ನಾನು ಎಂದು ಉತ್ತರಿಸುತ್ತಾರೆ. ಸದರಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಸಮಯದಲ್ಲಿ ಸದರಿ ಜಮೀನನ್ನು ಅಳತೆ ಮಾಡಿ ಗುಣಮಟ್ಟವನ್ನು ನೋಡಿ ಪರಿಹಾರವನ್ನು ನಿಗದಿಪಡಿಸಿದ್ದಾರೆ ಎಂದರೆ ಗೊತ್ತಿಲ್ಲ ಎಂದು ಉತ್ತರಿಸಿ ಸಾಕ್ಷಿ ಮುಂದುವರೆದು ಬಂದಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ಜಮೀನಿನ ಸ.ನಂ.345/ಎ ಇರುತ್ತದೆ. ನೀವು ಹಾಜರುಪಡಿಸಿದಂತಹ ಅವಾರ್ಡಿನಲ್ಲಿ ಸ.ನಂ.345/ಎ ನಂಬರ್ ಇಲ್ಲ ಎಂದರೆ ನನಗೆ confuse ಆಗುತ್ತಿದೆ ಎಂದು ಉತ್ತರಿಸುತ್ತಾರೆ. ಭೂಸ್ವಾಧೀನಪಡಿಸಿಕೊಳ್ಳುವ ಸಮಯದಲ್ಲಿ ಸ.ನಂ.345/ಎ ಇಲ್ಲದ ಕಾರಣ ನಿಮಗೆ 12(2) ನೋಟಿಸು ನೀಡಿಲ್ಲ ಎಂದರೆ ನಮ್ಮ ಹೊಲದಲ್ಲಿ ಕ್ಯಾನಲ್ ಹೋಗಿದೆ ಎಂದು ಉತ್ತರಿಸುತ್ತಾರೆ. ನೀವು ಹಾಜರುಡಿಪಸಿದಂತಹ ಅವಾರ್ಗಿನಲ್ಲಿ ನಿಮ್ಮ ಜಮೀನು ಸ.ನಂ.345/ಎ ಇಲ್ಲ ಎಂದು ಪರಿಹಾರ ನೀಡಿಲ್ಲ ಎಂದರೆ ಹಣ ಕೊಡಬೇಕೆಂದು ಈ ಅರ್ಜಿಯನ್ನು ಹಾಕಿರುತ್ತೇನೆ ಎಂದು ಉತ್ತರಿಸುತ್ತಾರೆ.

2. ನಿಪಿ-1 ರಲ್ಲಿ ಸ.ನಂ.345/ಅ ಮತ್ತು ಆ ಸೂಚಿಸಿರುತ್ತೀರಿ ಎಂದರೆ ಸರಿ. ನಿಪಿ-1ರಲ್ಲಿ ಇರುವಂತ ಅವಾರ್ಡಿನಲ್ಲಿ ಸ.ನಂ.345/ಎ ಇಲ್ಲ ಎಂದರೆ ಉತಾರ್ ತಂದು ಹಚ್ಚುತ್ತೇನೆ ಎಂದು ಉತ್ತರಿಸುತ್ತಾರೆ. 18 ಅರ್ಜಿಯನ್ನು ಕೊಡಲು ಯಾವುದೇ ಆಧಾರ ಇಲ್ಲ ಸುಳ್ಳಾಗಿ ಕೊಟ್ಟಿದ್ದೀರಿ ಎಂದರೆ ಸರಿಯಲ್ಲ. ಭೂಸ್ವಾಧೀನ 1990-91ರಲ್ಲಿ ಆಗಿದೆ ಎಂದರೆ

ಗೊತ್ತಿಲ್ಲ. ನಿಮ್ಮ ಪ್ರಕಾರ ಕ್ಯಾನಲ್ ಹಾಕಿ ಎಷ್ಟು ವರ್ಷ ಆಗಿದೆ ಎಂದರೆ 1990 ರಲ್ಲಿ ಎಂದು ಉತ್ತರಿಸುತ್ತಾರೆ. 1990 ರಲ್ಲಿ ಕ್ಯಾನಲ್ ಬಂದಿದೆ ಆದರೆ ನೀವು 2018ರಲ್ಲಿ protest petition ಹಾಕಿರುತ್ತೀರಿ ಯಾವ ಕಾರಣಕ್ಕೆ ತಡವಾಗಿ ಹಾಕಿರುತ್ತೀರಿ ಎಂದರೆ ಆಗ ನಾನು ಮಹಾರಾಷ್ಟ್ರದಲ್ಲಿ ಇದ್ದೆನು ಎಂದು ಉತ್ತರಿಸುತ್ತಾರೆ. ಆ ಸಮಯದಲ್ಲಿ ಮಹಾರಾಷ್ಟ್ರದಲ್ಲಿ ಇದ್ದೆನು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಕಚೇರಿಯಲ್ಲಿ ಕೊಟ್ಟಂತಹ protest petition ಕಾಲ ಮೀರಿದ ನಂತರ ಕೊಟ್ಟಿರುತ್ತೀರಿ ಎಂದರೆ ಗೊತ್ತಿಲ್ಲ. ಈ ಅರ್ಜಿಯನ್ನು ಹಾಕಲು ನಿಮಗೆ ಯಾವುದೇ ಆಧಾರ ಇಲ್ಲ ಮತ್ತು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ದಾಖಲೆ ಎಲ್ಲಾ ಕ್ಯಾನಲ್ ಕಚೇರಿಗೆ ಹೋಗಿ ತಂದಿರುತ್ತೇವೆ ಎಂದು ಉತ್ತರಿಸುತ್ತಾರೆ. ನಿಮಗೆ ಯಾವುದೇ ಸಾಕ್ಷಿ ಆಧಾರ ಇಲ್ಲದೇ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ